


1979ರ ಮಾರ್ಚ್ 10ರಂದು ಬೆಂಗಳೂರಿನಲ್ಲಿ ನಡೆದ ಪ್ರಥಮ ಬಂಡಾಯ ಸಾಹಿತ್ಯ ಸಮ್ಮೇಳನದಲ್ಲಿ ಕವಿ ಸಿದ್ಧಲಿಂಗಯ್ಯ ಮಾತನಾಡುತ್ತಿರುವುದು. ಚಿತ್ರದಲ್ಲಿ ತೆಲುಗು ಕವಿ ಶ್ರೀಶ್ರೀ, ಲೇಖಕರಾದ ದೇವನೂರ ಮಹಾದೇವ, ನಿರಂಜನ, ಮರಾಠಿ ಕವಿ ದಯಾ ಪವಾರ್ ಇದ್ದಾರೆ.

ಚಿತ್ರ: 'ಮಯೂರ' ಸಂಗ್ರಹ

ಲಕ್ಷದವರೆಗೂ ತಲುಪಿರುವುದು ಸಿದ್ಧಲಿಂಗಯ್ಯನವರು ಮಂಡಿಸಿದ ಪ್ರಸ್ತಾವನೆಯ ಫಲವೆಂಬುದನ್ನು ಚರಿತ್ರೆ ದಾಖಲಿಸಲೇಬೇಕಾಗುತ್ತದೆ.

## 'ಕ್ರಾಂತಿಯ ಬಿರುಗಾಳಿ' ಮತ್ತು ಜನಪ್ರಿಯತೆಯ ಸುಳಿಗಾಳಿ

ಸಿದ್ಧಲಿಂಗಯ್ಯನವರು ಹೆಚ್ಚು ಹೆಚ್ಚು ಸಾರ್ವಜನಿಕ ವ್ಯಕ್ತಿಯಾಗುತ್ತಾ, ಅವರ ಕಾವ್ಯ ಹೊಸ ಧಾಟಿಯ ಹಾಡುಗಳತ್ತ ತಿರುಗುತ್ತಿದ್ದ ಕಾಲದಲ್ಲಿ ಸಿನಿಮಾಲೋಕವೂ ಅವರನ್ನು ಕರೆಯಿತು. ಪುಟ್ಟಣ್ಣ ಕಣಗಾಲರ 'ಧರಣಿ ಮಂಡಲ ಮಧ್ಯದೊಳಗೆ' ಸಿನಿಮಾಕ್ಕೆ ಅವರು ಬರೆದ ಹಾಡುಗಳಲ್ಲಿ, 'ಗೆಳತಿ ಓ ಗೆಳತಿ, ಅಪ್ಪಿಕೋ ಎನ್ನ ಅಪ್ಪಿಕೋ, ಬಾಳೆಲ್ಲ ಎನ್ನ ತಬ್ಬಿಕೋ' ಹಾಡು ಅತ್ಯಂತ ಜನಪ್ರಿಯವಾಯಿತು; ಈ ಹಾಡಿನಿಂದಾಗಿ ತಮ್ಮ ಹಳೆಯ ಓದುಗರ ಕಟು ಟೀಕೆಯನ್ನೂ ಕವಿ ಎದುರಿಸಬೇಕಾಯಿತು! ಹೊಸ ತಲೆಮಾರಿನ ಕವಿ ಸಾಸಾರಾಂ ಸಿದ್ಧಲಿಂಗಯ್ಯನವರ 'ಅಪ್ಪಿಕೋ ಹಾಡು' ಕ್ರಾಂತಿಕವಿಯ ಪಲಾಯನವನ್ನು ಸೂಚಿಸುತ್ತದೆ ಎಂದು ಸಭೆಯೊಂದರಲ್ಲಿ ತಿರುಗಿ ಬಿದ್ದರು; ಆ ಸಭೆಯಲ್ಲಿದ್ದ ಲಂಕೇಶರು ಸಿದ್ಧಲಿಂಗಯ್ಯನವರ ಪರವಾಗಿ ಮಾತಾಡಿ, 'ನಮ್ಮ ಸಿದ್ಧಲಿಂಗಯ್ಯ ಅಪ್ಪಟ ಚಿನ್ನ' ಎಂದು ಅಪರೂಪಕ್ಕೆ ಮೆಚ್ಚಿದ್ದು ನೆನಪಾಗುತ್ತದೆ. ಮೊದಲು 'ಆದಿತ್ಯ' ಎಂಬ ಕಾವ್ಯನಾಮದಲ್ಲಿ